**ಓಎಸ್ ನಂಃ 54/2014**
**ಡಿಡಬ್ಲೂಃ 3**

**ಸಾಕ್ಷಿಗೆ ದಿನಾಂಕ 28-11-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಮ್.ವಿ.ಎಲ್. ವಕೀಲರಿಂದ

ನನಗೆ ಸರ್ವೆ ನಂಬರ್ ಗಳ ಬಗ್ಗೆ ಮಾಹಿತಿ ಇಲ್ಲ. ನನ್ನ ಆಸ್ತಿಯು ಪಶ್ಚಿಮ ದಿಕ್ಕಿಗೆ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 195/2 - 5ಎಕ್ರೆ 1 ಗುಂಟೆ ಜಾಗವು ಮೈಸೂರು ಭೂಧಾನ್ಯ ಬೋರ್ಡ್ ಎನ್ನುವವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ನಿಮಗೆ 4ಎಕ್ರೆ ಜಾಗ ಹೇಗೆ ಬಂತು ಎಂದು ಕೇಳಿದಾಗ ಸಾಕ್ಷಿಯು ನನಗೆ ಸರಕಾರದವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಮಗೆ ಸರಕಾರದವರು ಜಾಗ ನೀಡಿದ ಬಗ್ಗೆ ಯಾವುದಾದರೂ ದಾಖಲೆಗಳಿವೆಯಾ ಎಂದರೆ ಸಾಕ್ಷಿ ನಾನು ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸರಕಾರದವರು ನಿಮಗೆ ಜಾಗ ನೀಡಿದ ಬಗ್ಗೆ ಯಾವುದೇ ಹಕ್ಕು ಪತ್ರ ಅಥವಾ ಸಾಗುವಳಿ ಚೀಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪಹಣಿ ಪ್ರಕಾರ ಸರ್ವೆ ನಂಬರ್ 195/2 ಒಟ್ಟು 5ಎಕ್ರೆ 1 ಗುಂಟೆ ಇದ್ದು ಅದರಲ್ಲಿ 4 ಎಕ್ರೆ ನಿಮ್ಮ ಹೆಸರಿನಲ್ಲಿದ್ದು ಉಳಿದ 1 ಎಕ್ರೆ 1 ಗುಂಟೆಗೆ ಇಂದಿಗೂ ಸಹ ಮೈಸೂರು ಭೂಧಾನ್ಯ ಬೋರ್ಡ್ ರವರ ಹೆಸರಿದೆ ಎಂದರೆ ಸರಿ. ನೀವು ಅಕ್ರಮವಾಗಿ ಮೈಸೂರು ಭೂಧಾನ್ಯ ಬೋರ್ಡ್ ರವರ ಹೆಸರಿನಲ್ಲಿದ್ದ ಜಮೀನಿನ ಪಹಣಿಯಲ್ಲಿ ನಿಮ್ಮ ಹೆಸರನ್ನು ನಮೂದು ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಸರ್ವೆ ನಂಬರ್ 195/2 ರ ಪಶ್ಚಿಮಕ್ಕೆ ಸರ್ವೆ ನಂಬರ್ 195/1 ಇದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 195/1 ಇದು 10 ಎಕ್ರೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 195/1ರಲ್ಲಿ ವಾದಿಗೆ 5 ಎಕ್ರೆ 14 ಗುಂಟೆ ಪಶ್ಚಿಮಕ್ಕೆ ಉಳಿದಿದ್ದು ಉಳಿದ 4 ಎಕ್ರೆ 36 ಗುಂಟೆ ಜಾಗವನ್ನು ಮಾಣಿಕ್ ಮಲ್ಲಪ್ಪ ಇವರಿಗೆ ಲ್ಯಾಂಡ್ ಟ್ರಿಬ್ಯುನಲ್ ಆದೇಶದ ಪ್ರಕಾರ ನೀಡಲಾಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಮಾಣಿಕ್ ಮಲ್ಲಪ್ಪ ಇವರ ಜಮೀನಿನ ಪೂರ್ವದಲ್ಲಿ ಮೈಸೂರು ಭೂಧಾನ್ಯ ಬೋರ್ಡ್ ರವರ ಜಾಗ ಇದೆ ಎಂದರೆ ಸಾಕ್ಷಿ ನಾನು ಹಾಕಿಕೊಂಡ ಜಾಗ ಇದೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣಪತ್ರದಲ್ಲಿ ದಾವಾ ಆಸ್ತಿಯ ಪಶ್ಚಿಮಕ್ಕೆ ಮಾಣಿಕ್ ಮಲ್ಲಪ್ಪ ರವರ ಜಾಗ ಇದೆ ಎಂದು ತಪ್ಪಾಗಿ ನಮೂದು ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣಪತ್ರದಲ್ಲಿ ಕಾಣಿಸಿರುವ

ಚಕ್ ಬಂದಿ ತಪ್ಪಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 195ರಲ್ಲಿ ನಿಮಗೆ ಮತ್ತು 1ನೇ ಪ್ರತಿವಾದಿಗೆ ಯಾವುದೇ ಸಂಬಂಧ ಇಲ್ಲ ನೀವು ಅಕ್ರಮವಾಗಿ ವಾದಿಯ ದಾವಾ ಆಸ್ತಿಯಲ್ಲಿ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ತೊಂದರೆ ಕೊಟ್ಟ ಕಾರಣ ವಾದಿಯು ನಿಮ್ಮ ಮೇಲೆ ಈ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 195ರಲ್ಲಿ ವಾದಿ, ಮಾಣಿಕ್ ಮಲ್ಲಪ್ಪ ಮತ್ತು ಮೈಸೂರು ಭೂಧಾನ್ಯ ಬೋರ್ಡ್ ರವರ ಹೆಸರಿನಲ್ಲಿ ಮಾತ್ರ ಆಸ್ತಿ ಇದೆ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 1ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

**ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.**